## ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು

**ಸಿ.ಸಿ. ನಂ.350/2018**

**ಸಾಕ್ಷಿಃ ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರನ/ಳ ಹೆಸರು | : ಚೌಡಮ್ಮ |
| ಗಂಡನ ಹೆಸರು | : ತಿಮ್ಮಬೋವಿ |
| ವಯಸ್ಸು | : 62 ವರ್ಷ |
| ಉದ್ಯೋಗ | : ಕೂಲಿಕೆಲಸ |
| ವಾಸಸ್ಥಳ | : ಬಸವರಾಜುಪುರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 28.03.2026.**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ಆರೋಪಿತರ ಪರಿಚಯ ಇರುತ್ತದೆ. ಚಾಸಾ–2 ರಿಂದ 5 ರವರ ಪರಿಚಯ ಇದೆ. ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿತರು ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಯಾವುದೇ ಹಲ್ಲೆ ಮಾಡಿರುವುದಿಲ್ಲ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–1 ಎಂದು ಗುರುತಿಸಲಾಯಿತು. ಮಹಜರನ್ನು ನೋಡಿ ಸಾಕ್ಷಿ ಗುರುತಿಸಿದ್ದು, ನಿಪಿ–2 ಎಂದು ಗುರುತಿಸಲಾಯಿತು. ನಿಪಿ–1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ನಾನು ನೀಡಿದ ದೂರಿಗೆ ಸಂಬಂಧಿಸಿದಂತೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಎಪಿಪಿಯವರಿಂದಃ

ದಿಃ 01.06.2018 ರಂದು ರಾಃ 8.00 ಗಂಟೆ ಸಮಯದಲ್ಲಿ ನಾನು ಮನೆಯ ಹತ್ತಿರ ಇದ್ದಾಗ, 1 ಮತ್ತು 2ನೇ ಆರೋಪಿತರು ಮನೆಯ ಹತ್ತಿರ ಬಂದು ಜಮೀನು ವಿಚಾರವಾಗಿ ಜಗಳ ತೆಗೆದು ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾ-2 ರವರಿಗೆ ಕೈಗಳಿಂದ ಮೈ ಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. 1ನೇ ಆರೋಪಿ ಕಲ್ಲಿನಿಂದ ನನ್ನ ಎಡಗಣ್ಣಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಆಗ ಅಲ್ಲಿ ಇದ್ದ ಚಾಸಾ-3 ರಿಂದ 5 ರವರು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 07.06.2018 ರಂದು ಪೊಲೀಸರು ಮೇಲೆ ಹೇಳಲಾದ ಕೃತ್ಯ ಸ್ಥಳಕ್ಕೆ ಬಂದು ನಾನು ತೋರಿಸಿದ ಕೃತ್ಯ ಸ್ಥಳದಲ್ಲಿ ಮಃ 2.00 ರಿಂದ 3.00 ಗಂಟೆ ವರೆಗೆ, ನನ್ನ ಹಾಗೂ ಚಾಸಾ-6 ರಿಂದ 8 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಮಾಡಿ ಒಂದು ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ನೀಡಿದ ದೂರಿಗೆ ಸಂಬಂಧಿಸಿದಂತೆ ನಿಪಿ-3 ರಂತೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ರಾಜಿ ಆಗಿದೆ ಎಂದರೆ ಸರಿ. ರಾಜಿ ಆಗಿರುವ ಕಾರಣ ನಿಪಿ-1 ರಿಂದ 3 ರಲ್ಲಿರುವ ವಿಚಾರಗಳು ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಎಂದು ನುಡಿದಿರುತ್ತಾರೆ.
ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು

**ಸಿ.ಸಿ. ನಂ.**

**ಸಾಕ್ಷಿಃ ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 1**

ಸಾಕ್ಷಿದಾರನ/ಳ ಹೆಸರು :

ತಂದೆಯ ಹೆಸರು :

ವಯಸ್ಸು : 37 ವರ್ಷ

ಉದ್ಯೋಗ : ಶೇತ್ಕಿ

ವಾಸಸ್ಥಳ : ಮಲಾಬಾದ, ಅಥಣಿ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 21.12.2023**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ಚಾಸಾ1 ಮತ್ತು 3 ರವರ ಪರಿಚಯ ಇರುವುದಿಲ್ಲ. ಈ ಕೇಸಿಗೆ ಸಂಬಂಧಿಸಿದಂತೆ 2 ವರ್ಷಗಳ ಹಿಂದೆ ಅಥಣಿ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಯಿಸಿ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತ ಪಡಿಸಿಕೊಂಡು ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿ.ಪಿ.1 ಎಂದು ಸಹಿಯನ್ನು ನಿ.ಪಿ.1ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಎಪಿಪಿಯವರಿಂದಃ

ದಿ.05.05.2018ರಂದು ಮಧ್ಯಾಹ್ನ 4.00 ಗಂಟೆಗೆ ಚಾಸಾ 1ರವರು ಮತ್ತು ಆರೋಪಿತರಿಗೆ ಜಗಳವಾದ ಸ್ಥಳಕ್ಕೆ ನನ್ನನ್ನು ಕರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಹಲ್ಲೆಗೆ ಉಪಯೋಗಿಸಿದ ಒಂದು ಬಡಿಗೆಯನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ಈಗ ಓದಿ ಹೆಳಿದಂತೆ ಪಂಚನಾಮೆಯನ್ನು ಬರೆದು ಓದಿ ಹೇಳಿ ಸ್ಥಳದಲ್ಲಿಯೇ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಷಯ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

4ನೇ ಹೆಚ್ಚುವರಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.